ಕೊಟ್ಟು ಬಂದಿದ್ದಾಳೆ. ಈಗಿನ ಗಲಾಟೆ, ಬಹುಶಃ ಸಂಜೆ ನಡೆದ ಗಲಾಟೆಯ ಮುಂದುವರಿದ ಭಾಗ' ಎಂದು ಅತ್ತಂದಿತ್ತಿನವರೆಗಿನ ಘಟನೆಯನ್ನು ಉದ್ದಕ್ಕೆ ಹೇಳಿದ.

ಗಲಾಟೆ ದೊಂಬಿಯಾಗಿ ಬದಲಾಗಿ ಇನ್ನಷ್ಟು ಚುರುಕಾದಂತೆ ಕೇಳತೊಡಗಿತು. ಜ್ಯೋತ್ಸ್ನಾಳ ಅಪ್ಪ ಅಮ್ಮ ತಮ್ಮ ಮನು ಮೂವರೂ ಅಂಗಳ ದಾಟಿ ಮೆಟ್ಟಿಲಿಳಿದು ರಸ್ತೆಗೆ ಹೋಗಿ ನಿಂತರು. ಇವರು ಕೆಳಗಿಳಿದು ಹೋದದ್ದು ಅಗತ್ಯ ಬಿದ್ದರೆ ಸಹಾಯ ಮಾಡಲೋ, ಇನ್ನಷ್ಟು ವಿಷಯ ತಿಳಿದುಕೊಳ್ಳಲೋ ಎಂಬ ಗೊಂದಲದಲ್ಲಿ ಮತ್ತೆರಡು ನಿಮಿಷ ಹೇಡಿಗೆಯಲ್ಲೇ ಜ್ಯೋತ್ಸ್ನಾ ಕೂತಳು.

ನಂತರ ಅಲ್ಲಿಂದ ಎದ್ದು ಹೊರಜಗುಲಿ ಹಾದು ಇಕ್ಕಟ್ಟಾದ ಒಳಜಗುಲಿಗೆ ಬಂದಳು. ನೀಲ್ ಚಂದದ ನಿದ್ದೆಯಲ್ಲಿದ್ದ. ಹಸ್ತದ ಬೆರಳುಗಳನ್ನು ಹೆಣೆದು ಅವನ್ನು ಎದೆಯ ಮೇಲಿಟ್ಟು ಮೊಳಕಾಲಿನ ಮೇಲಷ್ಟೇ ಹೊದಿಕೆ ಹೊದ್ದು ಮಲಗಿದ್ದವನನ್ನು ಹಗುರಾಗಿ ಮುದ್ದಿಸಿದಳು. ಒಮ್ಮೆ ಅವನ ಕಿವಿಯ ಸಂದಿನಲಿ ತನ್ನ ತುಟಿಗಳನ್ನು ಊರಿದಳಷ್ಟೆ, ನೀಲ್ ಅರೆ ಎಚ್ಚರದಲ್ಲೇ ಜ್ಯೋತ್ಸ್ನಾಳನ್ನು ತೆಕ್ಕೆಗೆ ಎಳೆದುಕೊಂಡ. ಅವನೆದೆಯ ಮೇಲೆ ಇಟ್ಟ ತಲೆ ಎತ್ತಿ ಅವನ ಕಣ್ಣುಗಳಿಗಷ್ಟೇ ತನ್ನ ಕೈಯ್ಯನ್ನು ಬೊಗಸೆ ಮಾಡಿ 'ಕಮ್ ವಿಥ್ ಮೀ ಹನೀ' ಎಂದಳು. ನೀಲ್ ಅರೆಬೆಳಕಿನಲ್ಲಿಯೇ ಒಮ್ಮೆ ಅವಳ ಮುಖವನ್ನು ದಿಟ್ಟಿಸಿದ. ಅವನ ನಿದ್ದೆ ಎದ್ದು ಓಡಿಹೋಗಿದ್ದು ಖಾತ್ರಿಯಾಯಿತು. ಅವಳನ್ನು ಹಿಂಬಾಲಿಸಿದ.

ಜ್ಯೋತ್ಸ್ನಾ ನೀಲ್‌ನ ಕೈ ಹಿಡಿದೆಳೆದು ಹೊರಜಗುಲಿಯ ತುದಿಯಲ್ಲಿದ್ದ ವೃತ್ತಾಕಾರದ ಮೆಟ್ಟಲುಗಳನ್ನು ಓಡಿಕೊಂಡೇ ಹತ್ತಿದಳು. ಅಲ್ಲಿಂದ ಮುಂದೆ ಗೌವ್ವೆನ್ನುವ ಕತ್ತಲನ್ನು ಖುಷಿಯಿಂದ ಅನುಭವಿಸುತ್ತ ನಿಂತ ಕಂಬಗಳ ಕೋಣೆ. ವರ್ಷಗಳೇ ಸಂದಿದ್ದರೂ ಅವಳ ಹೆಜ್ಜೆ ತಪ್ಪಲಿಲ್ಲ, ಯಾವ ಕಂಬಕ್ಕೂ ಹೊಡೆಯದೆ ಮೇಲಿನಮಾಳಿಗೆಯ ಏಣಿ ತಲುಪಿದಳು. ಅವನ ಕೈಯ್ಯನ್ನು ಭದ್ರವಾಗಿ ಹಿಡಿದೇ ಆ ಏಣಿಯನ್ನು ಹತ್ತಿದಳು. ತಲೆಗೆ ತಾಕಿದ ತಗಡಿನ ಬಾಗಿಲನ್ನು ತುಸುವೆ ಓರೆ ಮಾಡಿ ಕುತ್ತಿಗೆಯನ್ನು ಮಾತ್ರ ಎತ್ತಿ ಮೇಲಿನಮಾಳಿಗೆಯ ಘಮ ನೇರ ಕಪಾಲಕ್ಕೆ ಉಗ್ಗುವಂತೆ ಉಸಿರೆಳೆದುಕೊಂಡಳು. ಎರಡು ಮೆಟ್ಟಿಲ ಕೆಳಗೆ ಅವಳ ಕೈ ಹಿಡಿದು ನಿಂತ ನೀಲ್. ಸಪ್ತಪದಿ ತುಳಿಯಲು ಸಿದ್ಧವಾಗಿ ನಿಂತತಿತ್ತು ಅವನ ನಿಲುವು. ಅವನ ಕೈ ಜಗ್ಗಿದ ರಭಸಕ್ಕೆ ಒಂದೇ ಏಟಿಗೆ ಇಬ್ಬರೂ ಮೇಲ್ಮೆತ್ತಿಯ ಚಿತ್ತಾರದ ಕಿಟಕಿಯೆದುರಿಗೆ ನಿಂತರು. ಸ್ವಲ್ಪವೇ ತೆರೆದ ಕಿಟಕಿಯ ಬಾಗಿಲಿನ ಆಸುಪಾಸಲ್ಲಿ ಸಮುದ್ರದ ನೊರೆಯಂಥ ಬೆಳದಿಂಗಳು. ಜತೆಗೆ ದೂರದಲ್ಲಿ ಕೇಳಿಬರುತ್ತಿದ್ದ ಗಂಡಸರ ಹೆಂಗಸರ ಜಗಳದಂಥ ಗಲಾಟೆ. ನಡುವಲ್ಲಿ ಒಮ್ಮೊಮ್ಮೆ ಮೋಟಾರಿನ ಸದ್ದು.

ಅರೆತೆರೆದ ಚಿತ್ತಾರದ ಕಿಟಕಿಯ ಬಾಗಿಲನ್ನು ಸಶಬ್ದವಾಗಿ ಪೂರ್ತಿ ತೆರೆದಳು ಜ್ಯೋತ್ಸ್ನಾ.

ಮೂಲೆಯಲ್ಲಿ ಗುಪ್ಪೆ ಬಿದ್ದಿರಬಹುದಾದ ಬಾವಲಿಗಳ ಹಿಕ್ಕೆಯ ವಾಸನೆ, ಬೆತ್ತದಪೆಟ್ಟಿಗೆಯಲ್ಲಿ ಬೆಚ್ಚಗೆ ಕೂತಿರಬಹುದಾದ ಆಸ್ತಿಯ ಹರಕಲು ಕಾಗದ ಪತ್ರಗಳ ಪರಿಮಳ, ತಿಂಗಳ ಹಿಂದೆ ಸಗಣಿ ಸಾರಣೆ ಮಾಡಿರಬಹುದಾದ ನೆಲದ ಕಂಪು, ತುಸುವೇ ಗೆದ್ದಲು ಹಿಡಿದಿರಬಹುದಾದ ಕೋಳ್ಕಂಬದಿಂದ ಸೂಸುತ್ತಿದ್ದ ಸೊಗಡು, ಇವೆಲ್ಲದರ ಜತೆ ಸರಣಿಯಲ್ಲಿ ನಡೆದ ಅನಿರೀಕ್ಷಿತ ಘಟನೆಗಳಿಂದಾಗಿ ಏದುಸಿರು ಬಿಡುತ್ತ ಒತ್ತರಿಸಿದಂತೆ ನಿಂತ ತನ್ನ ನೀಲ್‌ನ ಬೆವರಿನ ಗಂಧ. ಎಲ್ಲವನ್ನೂ ಇಡಿಯಾಗಿ ಆಸ್ವಾದಿಸಿದಳು. ಇವೆಲ್ಲವೂ ನರನಾಡಿಗಳಲ್ಲಿ ಒಮ್ಮೆಲೇ ಹೊಕ್ಕಿದಂತಾಯಿತು. ನೀಲ್‌ನ್ ಕಂಕುಳು ಬಳಸಿ ತನ್ನ ಪೂರ್ತಿ ಭಾರವನ್ನು ಬೇಕೆಂತಲೇ ಅವನ ಮೇಲೊಗೆದು ತೆಕ್ಕೆಬಿದ್ದಳು. ಚಿತ್ತಾರದ ಕಿಟಕಿಯನ್ನು ಆಧಾರವಾಗಿಟ್ಟುಕೊಂಡ ನೀಲ್ ತುಸುವೂ ಪ್ರತಿರೋಧ ತೋರದೆ ನೆಲಕ್ಕೊರಗಿದ. ಅವನ ಕುತ್ತಿಗೆಯ ಇಳುಕಲಿನ ಮಿದು, ತೋಳಿನ ಕಸು, ನಾಭಿಯಿಂದೆದ್ದ ಹುಯಿಲು, ಕಿಬ್ಬೊಟ್ಟೆಯ ಕಂಪನ, ತೊಡೆಯ ನಡುವಿನ ಗಡಸು ಅವಳನ್ನು ಕ್ಷಣಕ್ಷಣಕ್ಕೂ ಅಣಿಗೆಡಿಸುತ್ತಲೇ ಬಯಕೆಯನ್ನು ಚೆಲ್ಲಾಪಿಲ್ಲಿ ಮಾಡುತ್ತಲೇ ಸರಿದಾರಿ ರಹದಾರಿ ತೋರತೊಡಗಿದವು.

ಅದೇ ಮುಹೂರ್ತವೆಂಬಂತೆ, ಚಿತ್ತಾರದ ಕಿಟಕಿಯ ಮೂಲಕ ಸೋಕತೊಡಗಿದ 'ರುಮ್ಮು ರುಮ್ಮು ರುಮ್ಮು' ತಮಟೆಯ ಸದ್ದು ಒಮ್ಮೆಲೇ ತೀಕ್ಷ್ಣಲಯ ಪಡೆದು ಇಡೀ ಊರನ್ನೇ ವ್ಯಾಪಿಸಿಕೊಳ್ಳತೊಡಗಿತು.

●